# www.karunaduexams.com

ಕ್ವಿಜ್-31 ಸಂವಿಧಾನ

www.karunaduexams.com

**ಕ್ವಿಜ್-31 ಸಂವಿಧಾನ**

**1.** ಭಾರತದ ಮಹಾನಿಯಂತ್ರಕ ಮತ್ತು ಲೆಕ್ಕಪರಿಶೋಧಕರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

I) ಇವರನ್ನು ಪ್ರಧಾನ ಮಂತ್ರಿಗಳ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಗಳು ನೇಮಿಸುತ್ತಾರೆ

II) ಸಿಎಜಿ ರವರು ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರು ಪಡೆಯಬಹುದಾದ ಎಲ್ಲಾ ಸೇವಾ-ಸವಲತ್ತುಗಳನ್ನು ಪಡೆಯುತ್ತಾರೆ

III) ಇವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಂಬಂಧಿಸಿದ ಲೆಕ್ಕಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿರುತ್ತಾರೆ

IV) ಇವರು ನಿವೃತ್ತಿ ಹೊಂದಿದ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಉದ್ಯೋಗ ಹೊಂದಲು ಅರ್ಹರಾಗಿರುತ್ತಾರೆ.

ಈ ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) I, II & III

ಇ) II, III & IV

ಈ) ಮೇಲಿನ ಎಲ್ಲವೂ

I, II & III

ಮೇಲಿನ ಒಂದು, ಎರಡು ಮತ್ತು ಮೂರನೇ ಹೇಳಿಕೆಗಳು ಸರಿಯಾಗಿವೆ. ಹೇಳಿಕೆ ನಾಲ್ಕು ತಪ್ಪಾಗಿದೆ. ಸಿಎಜಿ ರವರು ನಿವೃತ್ತಿ ಹೊಂದಿದ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಉದ್ಯೋಗ ಹೊಂದಲು ಅನರ್ಹರಾಗಿರುತ್ತಾರೆ.

**2.** ಹೊಸದಾಗಿ ರಚಿತವಾದ ಲೋಕಸಭೆಯ ಮೊದಲ ಅಧಿವೇಶನದ ಕಾರ್ಯಕಲಾಪ ಆರಂಭಿಸಲು ಹಿರಿಯ ಸದಸ್ಯರನ್ನು ಹಂಗಾಮಿ (Pro-term) ಸ್ಪೀಕರ್ ಆಗಿ ನೇಮಕ ಮಾಡುವವರು ಯಾರು?

ಅ) ಕೇಂದ್ರ ಸಚಿವ ಸಂಪುಟ

ಆ) ರಾಷ್ಟ್ರಪತಿಗಳು

ಇ) ನಿಕಟಪೂರ್ವ ಸ್ಪೀಕರ್

ಈ) ನೂತನ ಸದಸ್ಯರು

ರಾಷ್ಟ್ರಪತಿಗಳು

ಹೊಸದಾಗಿ ರಚಿತವಾದ ಲೋಕಸಭೆಯ ಮೊದಲ ಅಧಿವೇಶನದ ಕಾರ್ಯಕಲಾಪ ಆರಂಭಿಸಲು

www.karunaduexams.com

ಹಿರಿಯ ಸದಸ್ಯರನ್ನು ಹಂಗಾಮಿ (Pro-term) ಸ್ಪೀಕರ್ ಸಚಿವ ಸಂಪುಟದ ವ್ಯವಹಾರ ಸಮಿತಿ ಶಿಫಾರಸ್ಸಿನ ಮೇರೆಗೆ ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.

**3.** ರಾಷ್ಟ್ರಪತಿಗಳು ತಮ್ಮ ವಿವೇಚನಾಧಿಕಾರ ಬಳಸಬಹುದಾದ ಸಂದರ್ಭ ಯಾವುದು?

ಅ) ತುರ್ತು ಪರಿಸ್ಥಿತಿ ಘೋಷಣೆ ಸಂದರ್ಭದಲ್ಲಿ

ಆ) ಸಚಿವ ಸಂಪುಟದ ಸದಸ್ಯರ ಆಯ್ಕೆಯಲ್ಲಿ

ಇ) ಲೋಕಸಭೆಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತಗಳಿಸದೇ ಅಸ್ಥಿರ ಪರಿಸ್ಥಿತಿ ಎದುರಾದಾಗ

ಈ) ಯಾವುದೇ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆ ಸಂದರ್ಭದಲ್ಲಿ

ಲೋಕಸಭೆಯಲ್ಲಿ ಯಾವುದೇ ಪಕ್ಷ ಸ್ಪಷ್ಟ ಬಹುಮತಗಳಿಸದೇ ಅಸ್ಥಿರ ಪರಿಸ್ಥಿತಿ ಎದುರಾದಾಗ

**4.** ಭಾರತದ ಈ ಕೆಳಕಂಡ ಸಂಸ್ಥೆಗಳಲ್ಲಿ ಯಾವುದು ಸಂವಿಧಾನಾತ್ಮಕ ಸಂಸ್ಥೆಯಿಂದ ಹೊರತಾಗಿದೆ

ಅ) ಕೇಂದ್ರ ಹಣಕಾಸು ಆಯೋಗ

ಆ) ವಲಯ ಮಂಡಳಿಗಳು (Zonal Councils)

ಇ) ಕೇಂದ್ರ ಚುನಾವಣಾ ಆಯೋಗ

ಈ) ಕೇಂದ್ರ ಹಿಂದುಳಿದ ವರ್ಗಗಳ ಆಯೋಗ

ವಲಯ ಮಂಡಳಿಗಳು (Zonal Councils)

ವಲಯ ಮಂಡಳಿಗಳನ್ನು ಸಂಸತ್ತಿನಿಂದ ರೂಪಿಸಲಾದ ರಾಜ್ಯ ಪುನರ್ವಿಗಂಡಣಾ ಕಾಯಿದೆ 1956ರ ಮೂಲಕ ಸ್ಥಾಪಿಸಲಾಗಿದೆ. ಕೇಂದ್ರ-ರಾಜ್ಯ ಸಂಬಂಧಗಳನ್ನು ಮತ್ತು ಅಂತರರಾಜ್ಯ ಸಂಬಂಧಗಳನ್ನು ಸುಧಾರಿಸಲು ವಲಯ ಮಂಡಳಿಗಳನ್ನು ಸ್ಥಾಪಿಸಲಾಗಿದೆ.

**5.** ಭಾರತದ ಕೇಂದ್ರ ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ಈ ಹೇಳಿಕೆಗಳನ್ನು ಗಮನಿಸಿ

I) ಈ ಆಯೋಗ 1993 ರ ನಂತರ ಬಹು ಸದಸ್ಯ ಸಮಿತಿಯಾಗಿ ಮಾರ್ಪಟ್ಟಿತು

II) ಈ ಆಯೋಗದ ಮೊದಲ ಅಧ್ಯಕ್ಷರು ಕೆ.ವಿ.ಕೆ.ಸುಂದರಂ

III) ಚುನಾವಣಾ ಆಯೋಗದ ಅಧ್ಯಕ್ಷರ ಅವಧಿ 6 ವರ್ಷಗಳು

IV) ರಾಜ್ಯ ವಿಧಾನ ಪರಿಷತ್ ಚುನಾವಣೆಗಳನ್ನು ನಡೆಸುವ ಜವಾಬ್ದಾರಿ ಕೇಂದ್ರ ಚುನಾವಣಾ ಆಯೋಗದ್ದಾಗಿದೆ

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳನ್ನು ಸಂಕೇತಾಕ್ಷರಗಳಿಂದ ಗುರುತಿಸಿ:

ಅ) I, II & III

www.karunaduexams.com

ಆ) I & III

ಇ) I, II & III

ಈ) ಮೇಲಿನ ಎಲ್ಲವೂ

I & III

ಚುನಾವಣಾ ಆಯುಕ್ತರು ತಿದ್ದುಪಡಿ ಕಾಯಿದೆ-1993ರ ಪ್ರಕಾರ ಚುನಾವಣಾ ಆಯೋಗ ಬಹು ಸದಸ್ಯ ಆಯೋಗವಾಗಿ ಮಾರ್ಪಟ್ಟಿದೆ. ಅಂದರೆ ಒಬ್ಬ ಮುಖ್ಯಚುನಾವಣಾ ಆಯುಕ್ತರು ಮತ್ತು ಇಬ್ಬರು ಚುನಾವಣಾ ಆಯುಕ್ತರನ್ನು ಒಳಗೊಂಡಿದೆ. ಸುಕುಮಾರ್ ಸೇನ್ ಚುನಾವಣಾ ಆಯೋಗದ ಮೊದಲ ಆಯುಕ್ತರು.

**6.** ಭಾರತದಲ್ಲಿ ಸಂವಿಧಾನದ ಮೊದಲನೇ ತಿದ್ದುಪಡಿ ಈ ಕೆಳಕಂಡ ಯಾವ ದಿನಾಂಕದಂದು ಜಾರಿಗೆ ಬಂದಿತು

ಅ) ಜೂನ್ 18, 1951

ಆ) ಜನವರಿ 26, 1950

ಇ) ನವೆಂಬರ್ 26, 1952

ಈ) ಜುಲೈ 1, 1951

ಜೂನ್ 18, 1951

**7.** ಭಾರತದಲ್ಲಿ ಮತದಾನದ ವಯಸ್ಸನ್ನು 21 ರಿಂದ 18 ಕ್ಕೆ ಇಳಿಸಿದ ಸಂವಿಧಾನದ ತಿದ್ದುಪಡಿ ಯಾವುದು

ಅ) ಸಂವಿಧಾನದ ತಿದ್ದುಪಡಿ 72, 1990

ಆ) ಸಂವಿಧಾನದ ತಿದ್ದುಪಡಿ 61, 1989

ಇ) ಸಂವಿಧಾನದ ತಿದ್ದುಪಡಿ 81, 1985

ಈ) ಸಂವಿಧಾನದ ತಿದ್ದುಪಡಿ 75, 1991

ಆ) ಸಂವಿಧಾನದ ತಿದ್ದುಪಡಿ 61, 1989

**8.** ರಾಷ್ಟ್ರೀಯ ಏಕತಾ ಮಂಡಲಿಯ (National Integration Council) ಅಧ್ಯಕ್ಷರು ಯಾರಾಗಿರುತ್ತಾರೆ?

ಅ) ರಾಷ್ಟ್ರಪತಿ

ಆ) ಕೇಂದ್ರ ಗೃಹ ಮಂತ್ರಿಗಳು

www.karunaduexams.com

ಇ) ಪ್ರಧಾನಮಂತ್ರಿ

ಈ) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು

ಪ್ರಧಾನಮಂತ್ರಿ

**9.** ಸಂವಿಧಾನದ ತಿದ್ದುಪಡಿ 95, 2010 ರ ಪ್ರಕಾರ ಲೋಕಸಭೆ ಮತ್ತು ವಿಧಾನಸಭಾ ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಯಾವ ವರ್ಷದವರೆಗೆ ವಿಸ್ತರಿಸಲಾಯಿತು

ಅ) 2025

ಆ) 2030

ಇ) 2015

ಈ) 2020

2020

**10.** ಅಸ್ಸಾಂ, ನಾಗಲ್ಯಾಂಡ್, ಮಿಜೋರಾಂ ಮತ್ತು ಗೋವಾ ರಾಜ್ಯಗಳನ್ನು ಸ್ಥಾಪಿಸಿದ ಸರಿಯಾದ ಕಾಲಾನುಕ್ರಮ ಗುರುತಿಸಿ:

ಅ) ಅಸ್ಸಾಂ, ನಾಗಲ್ಯಾಂಡ್, ಮಿಜೋರಾಂ, ಗೋವಾ

ಆ) ಅಸ್ಸಾಂ, ಮಿಜೋರಾಂ, ಗೋವಾ, ನಾಗಲ್ಯಾಂಡ್

ಇ) ಮಿಜೋರಾಂ, ಅಸ್ಸಾಂ, ಗೋವಾ, ನಾಗಲ್ಯಾಂಡ್

ಈ) ಅಸ್ಸಾಂ, ಮಿಜೋರಾಂ, ನಾಗಲ್ಯಾಂಡ್, ಗೋವಾ

ಅಸ್ಸಾಂ, ನಾಗಲ್ಯಾಂಡ್, ಮಿಜೋರಾಂ, ಗೋವಾ

ಅಸ್ಸಾಂ (15ನೇ ಆಗಸ್ಟ 1947), ನಾಗಲ್ಯಾಂಡ್ (1ನೇ ಡಿಸೆಂಬರ್, 1963), ಮಿಜೋರಾಂ (20ನೇ ಫೆಬ್ರುವರಿ 1987) ಮತ್ತು ಗೋವಾ (30ನೇ ಮೇ, 1987).

www.karunaduexams.com